# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1606**

**ಮಾನ್ಯ ಸದಸ್ಯರ ಹೆಸರು : ಡಾ|| ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)**

**ಉತ್ತರಿಸುವ ದಿನಾಂಕ : 18.03.2026**

**ಉತ್ತರಿಸುವ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಮತ್ತು ಪ್ರಾಯೋಜಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು ಯಾವುವು. | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪಶುಸಂಗೋಪನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಕೇಂದ್ರ ಸರ್ಕಾರದ ಪುರಸ್ಕೃತ ಮತ್ತು ಪ್ರಾಯೋಜಿತ ಯೋಜನೆಗಳು ಮತ್ತು ಕಾರ್ಯಕ್ರಮಗಳು ಈ ಕೆಳಕಂಡಂತಿದೆ.<br>1) ಕೇಂದ್ರ ಸರ್ಕಾರದ ರಾಷ್ಟ್ರೀಯ ಜಾನುವಾರು ಮಿಷನ್ (NLM) ಅಡಿಯಲ್ಲಿ<br>• ಜಾನುವಾರು ವಿಮಾ ಕಾರ್ಯಕ್ರಮ.<br>• ಮೇವು ಮತ್ತು ಆಹಾರ ಅಭಿವೃದ್ಧಿ ಉಪ ಯೋಜನೆ ಕಾರ್ಯಕ್ರಮ.<br>• ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ.<br><br>2) ಕೇಂದ್ರ ಸರ್ಕಾರದ ರಾಷ್ಟ್ರೀಯ ಗೋಕುಲ್ ಮಿಷನ್ ಯೋಜನೆಯಡಿಯಲ್ಲಿ<br>• ರಾಷ್ಟ್ರೀಯ ಕೃತಕ ಗರ್ಭಧಾರಣೆ ಕಾರ್ಯಕ್ರಮ.<br><br>3) ರಾಷ್ಟ್ರೀಯ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮದಡಿ (NADCP) FMD, PPR, CSF ಮತ್ತು Brucellosis ರೋಗಗಳ ವಿರುದ್ಧ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.<br><br>4) ನಿರ್ಣಾಯಕ ಪ್ರಾಣಿ ರೋಗ ನಿಯಂತ್ರಣ ಕಾರ್ಯಕ್ರಮದ ಅಡಿ PPR ಮತ್ತು ಹಂದಿ ಜ್ವರ ವಿರುದ್ಧ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ.<br><br>5) ಪ್ರಾಣಿಗಳ ರೋಗಗಳ ತಹಬಂದಿಗಾಗಿ ರಾಜ್ಯಗಳಿಗೆ ನೆರವು (ASCAD) ಯೋಜನೆಯಡಿಗಳಲೆ ರೋಗ, ಚಪ್ಪೆ ರೋಗ, ನೆರಡಿ ರೋಗ, ಕರಳು ಬೇನೆ, ನೀಲಿ ನಾಲಿಗೆ ರೋಗ, ಕುರಿ ಮತ್ತು ಮೇಕೆ ಸಿಡುಬು ಮತ್ತು ಹುಚ್ಚು ನಾಯಿ ರೋಗವನ್ನು ತಡೆಗಟ್ಟಲು ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. |

...2

| | | |
|---|---|---|
| | | 6) ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ ಯೋಜನೆಯಡಿ ಕಲಬುರಗಿ ಜಿಲ್ಲೆಯಲ್ಲಿ 11 ಮತ್ತು ಯಾದಗಿರಿ ಜಿಲ್ಲೆಯಲ್ಲಿ 8 ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳು (MVU) ಕಾರ್ಯನಿರ್ವಹಿಸುತ್ತಿರುತ್ತದೆ. |
| ಆ) | ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳು ಯಾವುವು; | ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನದ ಬಗ್ಗೆ ಕೇಂದ್ರ ಸರ್ಕಾರ ನೀಡಿರುವ ಮಾರ್ಗಸೂಚಿಗಳನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಇ) | ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಅನುಷ್ಠಾನಕ್ಕೆ 3 ವರ್ಷಗಳಿಂದ ದೊರೆತಿರುವ ನೆರವು ಮತ್ತು ಇತರೆ ಸೌಲಭ್ಯಗಳು ಯಾವುವು.? | ಕೇಂದ್ರ ಸರ್ಕಾರದ ರಾಷ್ಟ್ರೀಯ ಜಾನುವಾರು ಮಿಷನ್ (NLM) ಅಡಿಯಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಕಳೆದ 3 ವರ್ಷಗಳಿಂದ ದೊರೆತಿರುವ ನೆರವು ಮತ್ತು ಸೌಲಭ್ಯಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಿದೆ. |

**ಪಸಂಮೀ 63 ಸಲೆವಿ 2026**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1606.

**ಅನುಬಂಧ-1**

1. **ಕೇಂದ್ರ ಪುರಸ್ಕೃತ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ(NLM) ಜಾನುವಾರು ವಿಮಾ ಕಾರ್ಯಕ್ರಮ**

ರೈತರು ರಾಸುಗಳನ್ನು ಆಕಸ್ಮಿಕ ಮರಣ ಇಲ್ಲವೆ ಇತರ ಕಾರಣಗಳಿಂದ ಕಳೆದು ಕೊಂಡಲ್ಲಿ ಆರ್ಥಿಕ ನಷ್ಟ ಭರಿಸುವ ಉದ್ದೇಶದಿಂದ 'ಜಾನುವಾರು ವಿಮಾ ಯೋಜನೆ'ಅನುಷ್ಠಾನಗೊಳಿಸಲಾಗುತ್ತಿದೆ.

**ಜಾನುವಾರಿನ ವಾಸ್ತವಿಕ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸುವ ಬಗ್ಗೆ:**

ರಾಷ್ಟ್ರೀಯ ಜಾನುವಾರು ಮಿಷನ್ ಮಾರ್ಗಸೂಚಿಗಳಂತೆ, ಜಾನುವಾರಿನ ವಾಸ್ತವಿಕ ಮಾರುಕಟ್ಟೆ ಮೌಲ್ಯವನ್ನು ಜಾನುವಾರು ಮಾಲೀಕರು, ಸಂಬಂಧಿಸಿದ ಪಶುವೈದ್ಯಾಧಿಕಾರಿಗಳು ಮತ್ತು ವಿಮಾ ಸಂಸ್ಥೆಯ ಪ್ರತಿನಿಧಿಗಳ ಸಹಮತದೊಂದಿಗೆ ರೂ.70000/- ಗಳ ಮಿತಿಗೊಳಪಟ್ಟು ನಿರ್ಧರಿಸಲಾಗುವುದು.

**ಅರ್ಹ ಫಲಾನುಭವಿಗಳ ಆಯ್ಕೆ ಮತ್ತು ಪ್ರೀಮಿಯಂ ಸಹಾಯಧನದ ವಿವರ**:

ಫಲಾನುಭವಿಗಳ ಹೈನುಗಾರಿಕೆಗೆ ಯೋಗ್ಯವಾದ ಬೆಲೆಯುಳ್ಳ ಒಂದು ವರ್ಷ ಮೇಲ್ಪಟ್ಟ ಮತ್ತು ವಿಮೆಗೊಳಪಡಿಸುವ ಸಮಯದಲ್ಲಿ ಗರಿಷ್ಠ ವಯಸ್ಸು 8 ವರ್ಷಗಳಿಗೆ ಮೀರದಂತಹ ಹಸು /ಆಕಳು / ಎಮ್ಮೆಗಳನ್ನು ಒಂದು ವರ್ಷದ/ ಮೂರು ವರ್ಷದ ಅವಧಿಗೆ ಗರಿಷ್ಠ ರೂ. 70 ಸಾವಿರ ಮೂಲ ಬೆಲೆಯವರೆಗೆ ಕೆಳಕಂಡ ಪ್ರೀಮಿಯಂ ಸಹಾಯಧನದ ದರದಂತೆ ವಿಮೆ ಸೌಲಭ್ಯ ಒದಗಿಸುವುದು.

**ಜಾನುವಾರು ವಿಮಾ ವಂತಿಗೆಯು ಕೆಳಕಂಡಂತಿರುತ್ತದೆ**:

| | |
|---|---|
| **ಸಹಾಯಧನ- 85%** | **ಫಲಾನುಭವಿಯ ವಂತಿಗೆ-15%** |

2. **ರಾಷ್ಟ್ರೀಯ ಜಾನುವಾರು ಮಿಷನ್ (ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ)**

ಭಾರತ ಸರ್ಕಾರದ ಪಶು ಸಂಗೋಪನ ಮತ್ತು ಹೈನುಗಾರಿಕೆ ಇಲಾಖೆಯ ವತಿಯಿಂದ 2021-22 ರಿಂದ 2025-26 ನೇ ಸಾಲಿನವರೆಗೆ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

**ಅರ್ಹ ಸಂಸ್ಥೆಗಳು**: ವೈಯಕ್ತಿಕ, ರೈತ ಉತ್ಪಾದಕ ಸಂಘಟನೆಗಳು, ಸ್ವ ಸಹಾಯ ಗುಂಪು, ಜಂಟಿ ಹೊಣೆಗಾರಿಕೆ ಗುಂಪು, Section 8 ಕಂಪನಿಗಳು.

- ಗ್ರಾಮೀಣ ಕೋಳಿ ಉದ್ಯಮಶೀಲತೆ ಮಾದರಿ ಲೋ ಇನ್ಪುಟ್ ಟೆಕ್ನಾಲಜಿಯ 1000 ಮಾತೃ ಕೋಳಿ ಫಾರ್ಮ್ ಸ್ಥಾಪನೆ, ಮರಿಗಳ ಉತ್ಪಾದನೆಗಾಗಿ ಹ್ಯಾಚರಿ ಮತ್ತು ಮರಿಗಳ ಸಾಕಣೆಕೆಗಾಗಿ ಪೋಷಕ ಘಟಕಗಳ ಸ್ಥಾಪನೆ. ಒಟ್ಟು ಗರಿಷ್ಠ ಯೋಜನಾ ವೆಚ್ಚ- ರೂ 50.00 ಲಕ್ಷ, ಸಹಾಯಧನ- ರೂ 25.00 ಲಕ್ಷ
- ಮೇಕೆ /ಕುರಿಮರಿಗಳ ಉತ್ಪಾದನೆಗೆ ಈ ಕೆಳಕಂಡಂತೆ ಕುರಿ ಮತ್ತು ಮೇಕೆ ಸಾಕಣೆ ಕೇಂದ್ರಗಳ ಸ್ಥಾಪನೆಗೆ ಶೇಕಡ 50 ರಷ್ಟು ಸಹಾಯಧನವನ್ನು ಒದಗಿಸಲಾಗುವುದು.
- ಹಂದಿ ಮರಿಗಳ ಉತ್ಪಾದನೆ ಮತ್ತು ಹಂದಿಮರಿಗಳ ಕೊಬ್ಬಿಸುವ ಸಾಕಾಣಿಕೆ ಕೇಂದ್ರಗಳಿಗೆ ಶೇಕಡ 50 ರಷ್ಟು ಸಹಾಯಧನವನ್ನು ಒದಗಿಸಲಾಗುವುದು.

ಪಶು ಆಹಾರ ಮತ್ತು ಮೇವು ಉದ್ಯಮಶೀಲತೆ ಪ್ರೋತ್ಸಾಹಿಸಲು ಸೈಲೇಜ್ ತಯಾರಿಕೆ ಘಟಕ, ಮೇವು ಬ್ಲಾಕ್ ತಯಾರಿಕೆ ಘಟಕ ಮತ್ತು ಟಿಎಂಆರ್ ಪ್ಲಾಂಟ್ ಸ್ಥಾಪನೆ : ಒಟ್ಟು ಗರಿಷ್ಠ ಯೋಜನಾ ವೆಚ್ಚ- ರೂ 100.00 ಲಕ್ಷ - ಸಹಾಯಧನ- ರೂ 50.00 ಲಕ್ಷ

3. **ರಾಷ್ಟ್ರೀಯ ಜಾನುವಾರು ಮಿಷನ್ (NLM) ಅಡಿಯಲ್ಲಿ ಮೇವು ಮತ್ತು ಆಹಾರ ಅಭಿವೃದ್ಧಿ ಉಪ ಯೋಜನೆ ಕಾರ್ಯಕ್ರಮ (ಕೇಂದ್ರದ ಪಾಲು ಶೇ.100)**

ರೈತರಿಗೆ ಉಚಿತವಾಗಿ ಮಿನಿಕಿಟ್‌ಗಳ ರೂಪದಲ್ಲಿ ಮೇವಿನಬೀಜಗಳನ್ನು ವಿತರಿಸಲಾಗುತ್ತಿದೆ.

**ನಿರ್ದೇಶಕರು**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1606

ಅನುಬಂಧ-2

**ರಾಷ್ಟ್ರೀಯ ಪಶು ಸಂಪತ್ತು ಅಭಿಯಾನ ಯೋಜನೆಯಡಿ ವಿತರಿಸಿರುವ ನೆರವು ಮತ್ತು ಸೌಲಭ್ಯಗಳ ವಿವರ**

ಕಲಬುರಗಿ ಜಿಲ್ಲೆ:

| | ಜಾನುವಾರು ವಿಮೆ | | ಮೇವು ಮತ್ತು ಆಹಾರ ಅಭಿವೃದ್ಧಿ ಉಪ ಯೋಜನೆ ಕಾರ್ಯಕ್ರಮ | | ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ (NLM EDP) | |
|---|---|---|---|---|---|---|
| | ವಿಮೆಗೊಳಪಡಿಸಿರುವ ಜಾನುವಾರುಗಳ ಸಂಖ್ಯೆ | ಮೊತ್ತ( ರೂ. ಲಕ್ಷಗಳಲ್ಲಿ) | ರೈತರಿಗೆ ಉಚಿತವಾಗಿ ವಿತರಿಸಿರುವ ಮೇವಿನ ಬೀಜದ ಕಿರು ಪೊಟ್ಟಣಗಳ ಸಂಖ್ಯೆ | ಮೊತ್ತ ರೂ. ಲಕ್ಷಗಳಲ್ಲಿ) | ಸಹಾಯಧನ ಪಡೆದಿರುವ ಫಲಾನುಭವಿಗಳ ಸಂಖ್ಯೆ | ಸಹಾಯಧನ (ರೂ. ಕೋಟಿಗಳಲ್ಲಿ) |
| 2023-24 | 264 | 8.81 | 874 | 3.23 | 9 | 2.22 |
| 2024-25 | 193 | 8.18 | 2797 | 11.33 | 11 | 2.25 |
| 2025-26 | 0 | 0 | 0 | 0 | 19 | 3.98 |
| ಒಟ್ಟು | **457** | **16.99** | **3671** | **14.56** | **39** | **8.45** |

ಯಾದಗಿರಿ ಜಿಲ್ಲೆ:

| | ಜಾನುವಾರು ವಿಮೆ | | ಮೇವು ಮತ್ತು ಆಹಾರ ಅಭಿವೃದ್ಧಿ ಉಪ ಯೋಜನೆ ಕಾರ್ಯಕ್ರಮ | | ಉದ್ಯಮಶೀಲತೆ ಅಭಿವೃದ್ಧಿ ಕಾರ್ಯಕ್ರಮ (NLM EDP) | |
|---|---|---|---|---|---|---|
| 2023-24 | 108 | 2.05 | 3150 | 12.22 | 9 | 2.22 |
| 2024-25 | 115 | 5.72 | 1413 | 6.12 | 11 | 2.25 |
| 2025-26 | 0 | 0 | 0 | 0 | 19 | 3.98 |
| ಒಟ್ಟು | **223** | **7.77** | **4563** | **18.34** | **39** | **8.45** |

ನಿರ್ದೇಶಕರು